651 ಡಾ.ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಸಂರಕ್ಷಣೆ ಮಾಡುತ್ತಿರುವ ಕೊಳ್ಳೇಗಾಲ ಪಟ್ಟಣದಲ್ಲಿರುವ ಶ್ರೀರಾಮ ಚಾವಡಿ ಪ್ರಾಚೀನ ಸ್ಮಾರಕವಾಗಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳ ಅಧಿನಿಯಮ 1962ರ ಅಡಿಯಲ್ಲಿ ಈ ದೇವಾಲಯ ಪ್ರಾಚೀನ ಸ್ಮಾರಕ ಎಂಬ ಪರಿಭಾಷೆಗೆ ಒಳಪಡುತ್ತದೆಯೇ;

ಇ) ಇಲ್ಲದಿದ್ದರೆ ಸಂರಕ್ಷಣಾ ಕಾಮಗಾರಿಗಳಿಗೆ [illegible] ಇರುವ ಮಾರ್ಗದರ್ಶನಗಳನ್ನು ಪಾಲಿಸದೇ ಕಾಮಗಾರಿಗಳನ್ನು ತೆಗೆದುಕೊಳ್ಳಲು ಕಾರಣವೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಹೌದು.

ಆ) ಒಳಪಡುತ್ತದೆ.

ಇ) ಉದ್ಭವಿಸುವುದಿಲ್ಲ.

825 ಶ್ರೀ ರಮಾನಾಥ್ ರೈ. ಬಿ. (ಬಂಟ್ವಾಳ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ವಾರ್ಷಿಕ ವರ್ಷದಲ್ಲಿ ಎಷ್ಟು ಆಶ್ರಯ ಮನೆಗಳನ್ನು ಮಂಜೂರಾತಿ ಮಾಡಲಾಗಿದೆ;

ಅ) ದಕ್ಷಿಣ ಕನ್ನಡ ಜಿಲ್ಲೆಗೆ ಎಷ್ಟು ಆಶ್ರಯ ಮನೆಗಳು ಮಂಜೂರಾಗಿದೆ;

ಇ) ಪ್ರಗತಿ ಕಾರ್ಯ ಕುಂಠಿತವಾಗಿರುವುದು ಸರ್ಕಾರದ ಗಮನದಲ್ಲಿದೆಯೇ;

ಈ) ಇದ್ದಲ್ಲಿ, ಕಾರಣಗಳನ್ನು ತಿಳಿಸುವುದು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಆಶ್ರಯ ಯೋಜನೆಯಡಿ ಪ್ರಸಕ್ತ 2009–10ನೇ ಸಾಲಿಗಾಗಿ ಗುರಿಯನ್ನು ನಿಗದಿಪಡಿಸಿರುವುದಿಲ್ಲ.